ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು) :

ಅ) ಬಂದಿದೆ.
ಆ) ಇದೆ.
ಇ) 241 ಗ್ರಾಮ ಲೆಕ್ಕಿಗರ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗುತ್ತಿದೆ.

ಜಿಲ್ಲೆ	ಸಂಖ್ಯೆ
ಗುಲ್ಬರ್ಗಾ	12
ಹಾಸನ	74
ಶಿವಮೊಗ್ಗ	71
ದಕ್ಷಿಣ ಕನ್ನಡ ಜಿಲ್ಲೆ	33
ಚಿತ್ರದುರ್ಗ	51

ವಿಷಯ : ರಾಜ್ಯದಲ್ಲಿ ಲಭ್ಯವಿರುವ ಕೃಷಿ ಯೋಗ್ಯ ಭೂಮಿ.

Q: 458

ಶ್ರೀ ಡಿ. ಆರ್. ಪಾಟೀಲ್ (ಗದಗ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಲಭ್ಯವಿರುವ ಕೃಷಿ ಯೋಗ್ಯ ಭೂಮಿ ಎಷ್ಟು?
ಆ) ಅದರಲ್ಲಿ ನೀರಾವರಿ ಭೂಮಿ ಎಷ್ಟು ಹಾಗೂ ಒಣ ಬೇಸಾಯ ಭೂಮಿ ಎಷ್ಟು?
ಇ) ರಾಜ್ಯದಲ್ಲಿ ಈವರೆಗೆ ಮಳೆ ಆಧಾರದ ಕೃಷಿ ಪ್ರದೇಶದಲ್ಲಿ ಪ್ರತಿ ಹನಿ ನೀರನ್ನು ಕೃಷಿ ಭೂಮಿಯಲ್ಲಿಯೇ ನಿಲ್ಲುವಂತೆ ಇಲ್ಲವೇ ಇಂಗುವಂತೆ ಮಾಡಲು ಈವರೆಗೆ ಕೈಗೊಂಡ ಕ್ರಮಗಳೇನು?
ಈ) ಅವುಗಳಿಂದಾಗಿ ಕಳೆದ ಒಂದು ದಶಕದಲ್ಲಿ ಆದ ವೆಚ್ಚವೆಷ್ಟು? ಹಾಗೂ ಈ ವರ್ಷ ಕಾರ್ಯಕ್ರಮಗಳಿಗೆ ಮಾಡಲಾಗುವ ವೆಚ್ಚ ಎಷ್ಟು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) 1990-91ನೇ ಸಾಲಿನ ಅಂಕಿ ಅಂಶಗಳ ಪ್ರಕಾರ ಸುಮಾರು 125.74 ಲಕ್ಷ ಹೆಕ್ಟೇರುಗಳು ಕೃಷಿ ಯೋಗ್ಯ ಭೂಮಿಯಾಗಿದ್ದು, ಈ ಭೂಮಿಯಲ್ಲಿ ಸುಮಾರು 108.81 ಲಕ್ಷ ಹೆಕ್ಟೇರುಗಳು ನಿವ್ವಳ ಬಿತ್ತಣಿ ವಿಸ್ತೀರ್ಣವಾಗಿರುತ್ತದೆ. ನೀರಾವರಿ ಭೂಮಿಯು 21.13 ಲಕ್ಷ ಹೆಕ್ಟೇರ್ ಆಗಿದ್ದು, ಉಳಿದ 82.68 ಲಕ್ಷ ಹೆಕ್ಟೇರ್‌ನಷ್ಟು ಒಣ ಬೇಸಾಯ ಭೂಮಿಯಾಗಿರುತ್ತದೆ.
ಆ) ರಾಜ್ಯದಲ್ಲಿ ಮಳೆಯಾಧಾರಿತ ಕೃಷಿ ಪ್ರದೇಶದಲ್ಲಿ ಪ್ರತಿ ಹನಿ ಮಳೆ ನೀರನ್ನು ಕೃಷಿ ಭೂಮಿಯಲ್ಲಿಯೇ ನಿಲ್ಲುವಂತೆ ಇಲ್ಲವೆ ಇಂಗುವಂತೆ ಮಾಡಿ ಮಳೆ ನೀರನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳಲು ಮತ್ತು ಭೂಸಾರ ಹಾಗೂ ನೀರಿನ ಸಂರಕ್ಷಣೆಯ ಈ ಕೆಳಕಂಡ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

1. ಬಡುಗಳ ನಿರ್ಮಾಣ.
2. ಸಸ್ಯ ಬದುಗಳ ನಿರ್ಮಾಣ.
3. ಕೊರಕಲು ತಡೆಗಳು.
4. ನೀರು ಸಂಗ್ರಹಣಾ ವಿನ್ಯಾಸಗಳಾದ ಕೃಷಿ ಹೊಂಡ ನಾಲಾ ಬದು, ವೆಂಟಿಂಡ್ ಡ್ಯಾಂ, ಆರ್.ಆರ್.ಎಸ್.ಗಳ ನಿರ್ಮಾಣ.
5. ತಿರುವುಗಾಲುವೆಗಳು.
6. ನೀರು ದಾರಿಗಳ ರಚನೆ.

ಈ) ಮೇಲ್ಕಾಣಿಸಿದ ಕಾಮಗಾರಿಗಳಿಂದಾಗಿ ಕಳೆದ ಒಂದು ದಶಕದಲ್ಲಿ ಆದ ವೆಚ್ಚ ರೂ. 16,331.39 ಲಕ್ಷಗಳು. 1992-93ನೇ ಸಾಲಿನಲ್ಲಿ 3184.12 ಲಕ್ಷ ರೂ.ಗಳನ್ನು ವೆಚ್ಚ ಮಾಡುವ ಗುರಿಯಿರುತ್ತದೆ.

<u>ವಿಷಯ : ರಾಷ್ಟ್ರೀಯ ಹಾಗೂ ರಾಜ್ಯ ಬೀಜ ನಿಗಮದಿಂದ ರೈತ ಸಮುದಾಯಕ್ಕೆ ಅನುಕೂಲವಾಗಿರುವ ಬಗ್ಗೆ.</u>

Q: 169

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹಾಗೂ ರಾಜ್ಯ ಬೀಜ ನಿಗಮಗಳಿಂದ ರಾಜ್ಯದ ರೈತ ಸಮುದಾಯಕ್ಕೆ ಅನುಕೂಲವಾಗಿದೆಯೇ?
ಆ) ರಾಷ್ಟ್ರೀಯ ಬೀಜ ನಿಗಮ ಹಾಗೂ ರಾಜ್ಯ ಬೀಜ ನಿಗಮಗಳಿರುವ ವ್ಯತ್ಯಾಸಗಳೇನು?
ಇ) ಈ ಎರಡೂ ಬೀಜ ನಿಗಮಗಳನ್ನು ಒಂದು ಮಾಡಲು ಸರ್ಕಾರ ಆಲೋಚಿಸಿದೆಯೇ, ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಹೆಚ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ಹೌದು. ಎರಡು ಬೀಜ ನಿಗಮಗಳು ಪ್ರಮಾಣೀಕರಿಸಿದ ಬಿತ್ತನೆ ಬೀಜಗಳನ್ನು ರೈತರಿಗೆ ಪೂರೈಸುತ್ತಿದ್ದು, ಹೆಚ್ಚಿನ ಕೃಷಿ ಉತ್ಪಾದನೆಗೆ ಸಹಕರಿಸುತ್ತಿದೆ.
ಆ) ರಾಷ್ಟ್ರೀಯ ಬೀಜ ನಿಗಮವು ಕೇಂದ್ರ ಸರ್ಕಾರದ ಅಂಗ ಸಂಸ್ಥೆಯಾಗಿದ್ದು ದೇಶದಾದ್ಯಂತ ಬೀಜೋತ್ಪಾದನೆ ಹಾಗೂ ವಿತರಣೆಯನ್ನು ಮಾಡುತ್ತಿದೆ. ಆದರೆ, ರಾಜ್ಯ ಬೀಜ ನಿಗಮವು ಕರ್ನಾಟಕ ರಾಜ್ಯದ ಅಂಗ ಸಂಸ್ಥೆಯಾಗಿದ್ದು, ಬೀಜೋತ್ಪಾದನೆ ಹಾಗೂ ವಿತರಣೆಯು ಮುಖ್ಯವಾಗಿ ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿರುತ್ತದೆ.
ಇ) ಇಲ್ಲ.

<u>ವಿಷಯ : ರಾಜ್ಯದಲ್ಲಿ ಆರಾಧನಾ ಯೋಜನೆಯಡಿಯಲ್ಲಿ ದುರಸ್ತಿಸಲಾದ ದೇವಸ್ಥಾನಗಳ ಸಂಖ್ಯೆ.</u>